**ಅಧ್ಯಾಪಕಿ:** 'ನಮ್ಮ ಭಾರತೀಯ ಪರಿವಾರಗಳಲ್ಲಿ ನಾವು ಪರಸ್ಪರ ಪ್ರೀತಿ ಹಂಚುತ್ತೇವೆ. ಒಬ್ಬರಿಗೊಬ್ಬರು ನೆರವಾಗುತ್ತೇವೆ' ಎನ್ನುವ ಮಾತಿಗೆ ಯಾರಾದರೊಬ್ಬರು ಒಂದು ಉದಾಹರಣೆ ಕೊಡಿ ನೋಡೋಣ.

**ಗುಂಡ:** ಪರಿವಾರದಲ್ಲಿ ಒಬ್ಬಳು ಸದಸ್ಯ ಕಾಯಿಲೆ ಬಿದ್ದರೂ ಆತನನ್ನು ನೋಡಲು ಆಗಮಿಸಿದವರು ತಂದಂತಹ ಹಣ್ಣು ಹಂಪಲುಗಳನ್ನು ಆನಂತರ ಮನೆ ಮಂದಿಯೆಲ್ಲರೂ ಸಮನಾಗಿ ಹಂಚಿ ತಿನ್ನುತ್ತಾರೆ!

***

**ಪತಿ:** ರಾತ್ರಿ ಕನಸಿನಲ್ಲಿ ಒಬ್ಬಳು ತರುಣಿ ಕಂಡಳು.

**ಪತ್ನಿ:** ಆಕೆ ಒಬ್ಬಳೇ ಬಂದಿದ್ದಳು ತಾನೇ?

**ಪತಿ:** (ಆಶ್ಚರ್ಯದಿಂದ) ಹೌದು ಕಣೇ, ನಿನಗೆ ಹೇಗೆ ತಿಳಿಯಿತು?

**ಪತ್ನಿ:** ಅವಳ ಪತಿ ನನ್ನ ಕನಸಿನಲ್ಲಿ ಬಂದಿದ್ದ!

***

**ಪತಿ:** ಕಳೆದ ನಾಲ್ಕು ಗಂಟೆಗಳಿಂದ ನಾನು ನಿನಗಾಗಿ ಕಾಯುತ್ತಿದ್ದೆ, ಎಲ್ಲಿ ಹೋಗಿದ್ದೆ?

**ಪತ್ನಿ:** ಶಾಪಿಂಗ್ ಮಾಡಲು ಬಿಗ್ ಬಜಾರ್‌ಗೆ ಹೋಗಿದ್ದೆ ಕಣ್ರೀ.

**ಪತಿ:** ಹೌದಾ... ಏನೇನು ತೆಗೆದುಕೊಂಡೆ?

**ಪತ್ನಿ:** ಒಂದು ಪ್ಯಾಕೆಟ್ ಹೇರ್ ಪಿನ್ ಮತ್ತು ನಲ್ವತ್ತು ಸೆಲ್ಫಿ..!

***

**ಪುಂಡ:** ಲಾಟರಿ ಟಿಕೆಟ್ ಕೊಳ್ಳುವ ಪುರುಷನಿಗೂ, ತನ್ನ ಪತ್ನಿಯ ಜೊತೆ ವಾಗ್ವಾದ ನಡೆಸುವ ಪುರುಷನಿಗೂ ಇರುವ ವ್ಯತ್ಯಾಸವೇನು?

**ಗುಂಡ:** ಲಾಟರಿ ಟಿಕೆಟ್ ಕೊಳ್ಳುವ ಪುರುಷನಿಗೆ ತಾನು ಗೆಲ್ಲುವ ಅವಕಾಶ ತೃಣಮಾತ್ರವಾದರೂ ಇದ್ದೇ ಇರುತ್ತದೆ!

***

ನೀವೆಂತ ಪೆದ್ದು ಇದೀರಿ. ಮಗ ಸ್ಟೇಟಸ್‌ನಲ್ಲಿ ಬರೀ ಲವ್ ಸಾಂಗ್ ಹಾಕ್ತಾ ಇದಾನೆ ಅಂದ್ರೆ ಅವನು ಪ್ರಾಯಕ್ಕೆ ಬಂದವ್ನೆ ಅಂತ ಅರ್ಥ ಕಣ್ರೀ...




ಎದುರುಗಡೆ ಅಪಾರ್ಟ್‌ಮೆಂಟ್‌ನ ಕಿಟಕಿಯಲ್ಲಿ ಮೀನಾ ನಾಲ್ಕೈದು ನಿಮಿಷಗಳಿಂದ ಕೈ ಅಲ್ಲಾಡಿಸುತ್ತಿರುವುದನ್ನು ಗಮನಿಸಿದ ಗುಂಡ ತಾನೂ ಪ್ರತಿಯಾಗಿ ಕೈ ಅಲ್ಲಾಡಿಸಿದ. ಆಗ ಹಿಂದಿನಿಂದ ಬೆನ್ನ ಮೇಲೊಂದು ಭಾರೀ ಹೊಡೆತ ಬಿತ್ತು. ಹಿಂತಿರುಗಿ ನೋಡಿದರೆ ಅಲ್ಲಿ ಗುಂಡನ ಶ್ರೀಮತಿ ನಿಂತಿದ್ದಳು. ಈತ ಹಲ್ಲುಗಿಂಜಿದ. ಆಕೆ ಕಣ್ಣರಳಿಸಿ ದಿಟ್ಟಿಸುತ್ತಾ ಅಂದಳು, 'ಎದುರು ಮನೆಯಾಕೆ ನಿಮಗೆ 'ಹಾಯ್' ಹೇಳುತ್ತಿಲ್ಲ. ಅವಳು ತನ್ನ ಮನೆಯ ಕಿಟಕಿಯ ಕನ್ನಡಿ ಶುಚಿಗೊಳಿಸುತ್ತಿದ್ದಾಳೆ, ಅಷ್ಟೇ'!

***

ಗುಂಡನ ಪ್ರಕಾರ ಜೀವನದ ನಿಜವಾದ ಸತ್ಯವೆಂದರೆ... ನಾವು ಜೀವನಪೂರ್ತಿ 'ನಾಲ್ಕು ಜನ ಏನಂತಾರೋ' ಎಂಬ ಅನುಮಾನದಲ್ಲೇ ಜೀವಿಸುತ್ತೇವೆ. ಅಂತಿಮವಾಗಿ ಆ ನಾಲ್ಕು ಜನರು ಮಾತ್ರ ನಮ್ಮ ದೇಹಕ್ಕೆ ತಮ್ಮ ಹೆಗಲು ಕೊಟ್ಟು, 'ರಾಮ್ ನಾಮ್ ಸತ್ಯ ಹೇ' ಎಂದಷ್ಟೇ ಹೇಳುತ್ತಾರೆ!

***

ಕೆಲವರು ಧನ ಕನಕಕ್ಕಾಗಿ ಕಲಹದಲ್ಲಿ ತೊಡಗಿರುತ್ತಾರೆ. ಕೆಲವರು ಧರ್ಮದ ಹೆಸರಿನಲ್ಲಿ ಜಗಳವಾಡುತ್ತಾರೆ; ಇನ್ನು ಕೆಲವರು ಜಾತಿಯ ಹೆಸರಿನಲ್ಲಿ ಲಡಾಯಿ ಮಾಡುತ್ತಾರೆ. ಕೇವಲ ಪತಿಪತ್ನಿ ಮಾತ್ರ ನಿಸ್ವಾರ್ಥವಾಗಿ ಯಾವುದೇ ಕಾರಣವಿಲ್ಲದೆ ಜಗಳವಾಡುತ್ತಾರೆ!

***


ಪತ್ನಿ ಪೀಡಿತ ಗುಂಡನ ಪ್ರಕಾರ ವಿವಾಹಿತ ಮಹಿಳೆಯರು ಯಾರೂ ಶುದ್ಧ ಶಾಖಾಹಾರಿಗಳಾಗಿರಲು ಸಾಧ್ಯವಿಲ್ಲ. ಏಕೆಂದರೆ ಎಂದಾದರೊಮ್ಮೆ ಅವರು ತಮ್ಮ ಪತಿಯ ತಲೆ ತಿಂದೇ ಇರುತ್ತಾರೆ!

***

ನೋಟುಗಳು ಮರದಿಂದ ಉದುರುತ್ತವೆಯೆ? ಎಂಬ ಪ್ರಶ್ನೆಗೆ ಹೌದೆನ್ನುವುದು ಗುಂಡನ ಅಭಿಪ್ರಾಯವಾಗಿದೆ. ಏಕೆಂದರೆ, ನೋಟುಗಳು ಕಾಗದದಿಂದಲೂ, ಕಾಗದವು ಮರದಿಂದಲೂ ತಯಾರಿಸಲ್ಪಟ್ಟವೆ!

***

ಪ್ರತಿ ವಿವಾಹಿತ ಪುರುಷನ ಜೀವನದಲ್ಲೂ ಈ ಎರಡು ಖರ್ಚುಗಳು ನಿಶ್ಚಿತವಾಗಿಯೂ ಆಗುತ್ತವೆ... ಪತ್ನಿ ಬೆಳ್ಳಗಿದ್ದರೆ ಸನ್ ಸ್ಕ್ರೀನ್ ಖರೀದಿಯ ಖರ್ಚು ಮತ್ತು ಪತ್ನಿ ಮಸುಕಾಗಿದ್ದರೆ ಫೇರ್ ಅಂಡ್ ಲವ್ಲಿ ಖರೀದಿಯ ಖರ್ಚು!




ಸರ್... ಆ ವಿದ್ಯಾರ್ಥಿಗಳು, 'ಮೊದಲು ನಮ್ಮ ಮನೆವರೆಗೆ ರಸ್ತೆ ಮಾಡಿಸಿ, ಆಮೇಲೆ ಸೈಕಲ್ ಕೊಡಿ' ಅಂತಿದ್ದಾರೆ!

**ಹಾಸ್ಟೆಲ್ ವಿದ್ಯಾರ್ಥಿ ಪುಂಡ:** ಒಂದು ಅಚಾತುರ್ಯವಾಯಿತು ಕಣೋ...

**ರೂಮ್ ಮೇಟ್ ಗುಂಡ:** ಅಂಥಾದ್ದೇನಾಯಿತೋ?

**ಪುಂಡ:** 'ಪುಸ್ತಕ ಕೊಳ್ಳಲು ಹಣ ಬೇಕು, ನನ್ನ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿ' ಎಂದು ಅಪ್ಪನಿಗೆ ವಾಟ್ಸಾಪ್ ಮೂಲಕ ತಿಳಿಸಿದ್ದೆ. ಅವರೀಗ 'ಯಾವ ಪುಸ್ತಕ? ನಾನೇ ಕಳಿಸುತ್ತೇನೆ' ಎಂದು ಮರು ಸಂದೇಶ ಕಳಿಸಿದ್ದಾರೆ. ನನಗೀಗ ದುಡ್ಡು ಬೇಕು. ಏನು ಮಾಡಲಿ?

**ಗುಂಡ:** ಅಷ್ಟೇ ತಾನೆ? ತಮ್ಮ ಸಹಿ ಹಾಕಿ ಚೆಕ್ ಪುಸ್ತಕ ಕಳಿಸಲು ಅವರಿಗೆ ಹೇಳಿಬಿಡು!

***

ಸಮಯ, ಸಂದರ್ಭ ನೋಡಿ ಒಮ್ಮೆ ತಾನು ಪ್ರೀತಿಸುತ್ತಿರುವ ಹುಡುಗಿಗೆ, ಗುಂಡ 'ಐ ಲವ್ ಯೂ' ಎಂದು ಹೇಳಿಯೇ ಬಿಟ್ಟ.

**ಹುಡುಗಿ:** ನಾನೂ ನಿನಗೆ 'ಐ ಲವ್ ಯೂ' ಎಂದು ಹೇಳಿದರೆ ನಿನಗೆ ಹೇಗನ್ನಿಸುತ್ತದೆ?

**ಗುಂಡ:** ಡಾರ್ಲಿಂಗ್, ನಾನಂತೂ ಖುಷಿಯಿಂದ ಸತ್ತೇ ಹೋಗುತ್ತೇನೆ.

**ಹುಡುಗಿ:** (ಕೀಟಲೆಯ ದನಿಯಲ್ಲಿ) ಸರಿ, ಹಾಗಾದರೆ ನಾನು ಹಾಗೆ ಹೇಳುವುದಿಲ್ಲ. ಏಕೆಂದರೆ ನೀನು ಸಾಯುವುದು ನನಗಿಷ್ಟವಿಲ್ಲ!

***

**ಗುಂಡ:** ಮನೆಯಲ್ಲಿ ಕೂತಿರುವಂತೆಯೇ ಕಣ್ಮುಚ್ಚಿ ತೆರೆಯುವುದರೊಳಗೆ ಹಣವನ್ನು ದುಪ್ಪಟ್ಟು ಮಾಡಲು ನಿನ್ನಿಂದ ಸಾಧ್ಯವೇ?

**ಪುಂಡ:** ನನ್ನಿಂದೇನು, ಯಾರಿಂದಲೂ ಸಾಧ್ಯವಿಲ್ಲ. ಹಾಗೆಲ್ಲಾ ಆಗುತ್ತಿದ್ದರೆ ಯಾರೂ ಶ್ರಮವಹಿಸಿ ದುಡಿಯುತ್ತಿರಲಿಲ್ಲ.

**ಗುಂಡ:** ಸಾಧ್ಯವಿದೆ ಕಣಯ್ಯಾ, ತುಂಬಾ ಸುಲಭ. ಹಣವನ್ನು ಕನ್ನಡಿಯೆದುರು ಇಟ್ಟು ಬಿಟ್ಟರೆ ಸಾಕು!

ಸಂಗ್ರಹ: ಸಂಧ್ಯಾ ಆರ್. ಶೆಟ್ಟಿ, ಮಹಾರಾಷ್ಟ್ರ